# ರೇಪ್ ಬಲೆಯಲ್ಲಿ ರೊನಾಲ್ಡೊ



ಕ್ರಿಶ್ಚಿಯಾನೊ ರೊನಾಲ್ಡೊ ಮೇಲಿದ್ದ ಲೈಂಗಿಕ ಹಲ್ಲೆಯ ಆರೋಪದ ಭೂತ 9 ವರ್ಷಗಳ ಬಳಿಕ ಮತ್ತೆ ಮೇಲೆದ್ದು ನಿಂತಿದೆ. 2009ರ ಜೂನ್ 13ರಂದು ಲಾಸ್ ವೇಗಾಸ್‌ನ ಹೋಟೆಲೊಂದರ ಕೋಣೆಯಲ್ಲಿ ಅಮೆರಿಕದ ಮಾಡೆಲಿಂಗ್ ಬೆಡಗಿ ಕ್ಯಾಥ್ರಿನ್ ಮೆಯೊರ್ಗ ಮೇಲೆ ರೊನಾಲ್ಡೊ ಲೈಂಗಿಕ ಹಲ್ಲೆ ನಡೆಸಿದ್ದಾನೆ ಎನ್ನುವುದು ಆರೋಪ. ಆಗ ಮಾಧ್ಯಮಗಳಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದ ಈ ಅತ್ಯಾಚಾರದ ಪ್ರಕರಣ, ಒಂದು ವರ್ಷದ ಬಳಿಕ ತಣ್ಣಗಾಗಿತ್ತು. ಎರಡೂ ಕಡೆಯ ವಕೀಲರು ಕುಳಿತು ರೊನಾಲ್ಡೊ ಮತ್ತು ಕ್ಯಾಥ್ರಿನ್ ನಡುವೆ ಬಹಿರಂಗಪಡಿಸಲಾಗದ ಒಪ್ಪಂದವೊಂದಕ್ಕೆ ಸಹಿ ಹಾಕಿಸಿದ್ದುದು ಪ್ರಕರಣ ತಣ್ಣಗಾಗಲು ಕಾರಣವಾಗಿತ್ತು. ಈಗ ಲಾಸ್ ವೇಗಾಸ್ ಪೊಲೀಸರು ಹಳೆಯ ಪ್ರಕರಣದ ಮರುತನಿಖೆ ಶುರು ಮಾಡಿದ್ದಾರೆ. ಕ್ಯಾಥ್ರಿನ್ ಪರ ವಕೀಲರು ನೀಡಿರುವ ಹೊಸ ದೂರು ಈ ಮರು ತನಿಖೆಗೆ ಕಾರಣ.

ರೊನಾಲ್ಡೊ ಸಾಮಾನ್ಯ ಸ್ಟಾರ್ ಅಲ್ಲ. ಫುಟ್‌ಬಾಲ್ ಲೋಕದ ಜೀವಂತ ದಂತಕಥೆ. 10 ಕೋಟಿ ಪೌಂಡ್ ಮೌಲ್ಯದ ಆಟಗಾರ. ಪೋರ್ಚುಗಲ್ ಫುಟ್‌ಬಾಲ್ ತಂಡದ ನಾಯಕ, ಜುವೆಂಟಸ್ ಫುಟ್‌ಬಾಲ್ ಕ್ಲಬ್ ಸೂಪರ್‌ಸ್ಟಾರ್. ರಿಯಲ್ ಮ್ಯಾಡ್ರಿಡ್ ಕ್ಲಬ್ ಅನ್ನು ಬಿಟ್ಟು ಜುವೆಂಟಸ್ ಕ್ಲಬ್ ಸೇರಲು ಈತ ಪಡೆದುಕೊಂಡ ಮೊತ್ತ ಬರೋಬ್ಬರಿ 100 ದಶಲಕ್ಷ ಯೂರೊ. ಇಂತಹ ಸೂಪರ್‌ಸ್ಟಾರ್ ಅತ್ಯಾಚಾರ ಮಾಡಿದ್ದಾನೆನ್ನುವುದು ಸಣ್ಣ ಸಂಗತಿಯೆ? ಹಾಗಾಗಿ ಈ ಹಳೆಯ ಪ್ರಕರಣ ಕೂಡಾ ಹೊಚ್ಚಹೊಸದರಂತೆ ಸುದ್ದಿ ಮಾಡುತ್ತಿದೆ. ಜರ್ಮನಿಯ ಮ್ಯಾಗಜಿನ್ 'ಡರ್ ಸ್ಪೀಗಲ್' ಇತ್ತೀಚೆಗೆ 'ಮಿ ಟೂ' (#Me too) ಅಭಿಯಾನವನ್ನು ಆರಂಭಿಸಿದೆ. ಅದರನ್ವಯ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರ ಕಥೆಗಳನ್ನು ಪ್ರಕಟಿಸುತ್ತಿದೆ. ಈ ಸರಣಿಯಡಿ ಪತ್ರಿಕೆಗೆ ಸಂದರ್ಶನ ನೀಡಿದ ಕ್ಯಾಥ್ರಿನ್, ತನ್ನ ಹಳೆಯ ದುಃಖವನ್ನು ತೋಡಿಕೊಂಡಿದ್ದಾಳೆ. ಅದೀಗ ವಕೀಲರ ಮೂಲಕ ಮತ್ತೆ ದೂರಾಗಿ ಪರಿವರ್ತನೆಯಾಗಿ ಪೊಲೀಸರಿಂದ ಮರುತನಿಖೆ ಆರಂಭಗೊಂಡಿದೆ.

ಈ ಅತ್ಯಾಚಾರ ಆರೋಪ ಸಾಬೀತಾದರೆ ರೊನಾಲ್ಡೊ ಕನಿಷ್ಠ 10 ವರ್ಷ ಜೈಲುವಾಸ ಅನುಭವಿಸಬೇಕಾಗಬಹುದು. ಅಷ್ಟು ಮಾತ್ರವಲ್ಲ, ಆತನ ಮೇಲೆ ಕೋಟ್ಯಂತರ ಡಾಲರ್ ಜಾಹೀರಾತು ಹಣ ಸುರಿಯುತ್ತಿರುವ ಕಂಪನಿಗಳು ಹಿಂದೆ ಸರಿಯಬಹುದು. ಈಗಾಗಲೆ ನೈಕ್ ಮತ್ತು ಇಎ ಕಂಪನಿಗಳು ಈ ಪ್ರಕರಣದ ಕುರಿತು ತಮ್ಮ ಆತಂಕವನ್ನು ಪ್ರಕಟಿಸಿವೆ. ಇನ್ನಷ್ಟು ಕಂಪನಿಗಳು ಅದೇ ಹಾದಿ ಹಿಡಿಯಬಹುದು. ಅದೀಗ ರೊನಾಲ್ಡೊ ಮತ್ತು ಆತನ ವಕೀಲರ ಭಯ.

ನಿಜಕ್ಕೂ 9 ವರ್ಷಗಳ ಹಿಂದೆ ಹೋಟೆಲಲ್ಲಿ ರೊನಾಲ್ಡೊ ಅತ್ಯಾಚಾರ ನಡೆಸಿದ್ದನೆ? ಈವರೆಗಿನ ಕೇಸ್ ಸ್ಟಡಿಯನ್ನು ಗಮನಿಸಿದರೆ, ರೊನಾಲ್ಡೊ ಈ ಆರೋಪದಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ. ಸಿಕ್ಕಿಬೀಳುವಂತಹ ಹಲವು ನಡೆಗಳನ್ನು ರೊನಾಲ್ಡೊ ನಡೆಸಿದಂತಿದೆ. ಅವತ್ತು ಘಟನೆ 'ನಡೆಯುವುದಕ್ಕಿಂತ' ಮುಂಚೆ, ಅದೇ ಹೋಟೆಲಿನ ಬಾರ್‌ನಲ್ಲಿ ಇಬ್ಬರೂ ಡ್ಯಾನ್ಸ್ ಮಾಡುತ್ತಿದ್ದ ಫೋಟೋಗಳು ಜಗಜ್ಜಾಹೀರಾಗಿವೆ. ಕ್ಯಾಥ್ರಿನ್ ಪ್ರಕಾರ – ''ಆತ ನನ್ನನ್ನು ತಳ್ಳಿಕೊಂಡು ಕೋಣೆಗೆ ಕರೆದೊಯ್ದ. ಅಲ್ಲಿ ಲೈಂಗಿಕ ಹಲ್ಲೆ ನಡೆಸಲು ತೊಡಗಿದಾಗ ನಾನು 'ನೋ, ಸ್ಟಾಪ್' ಎಂದು ಪದೇ ಪದೇ ಹೇಳಿದೆ. ಆತ ಬಲವಂತದಿಂದ ಮುಂದುವರಿದ. ಕೊನೆಗೆ ಎಲ್ಲ ಮುಗಿದ ಮೇಲೆ 'ಸ್ಸಾರಿ' ಎಂದ. 'ನಾನು ಇಂಥವನಲ್ಲ, ಏನೋ ನಡೀತು, ಕ್ಷಮಿಸು'' ಎಂದ.

ನಡೆದದ್ದು ಅತ್ಯಾಚಾರ ಅಲ್ಲ, ಇಬ್ಬರ ಸಮ್ಮತದಿಂದ ನಡೆದಿದೆ ಎಂದು ಆ ಬಳಿಕ ರೊನಾಲ್ಡೊ ಹೇಳಿದ್ದ. ಮಾತ್ರವಲ್ಲ ವಕೀಲರ ಸಲಹೆಯ ಮೇರೆಗೆ ಕ್ಯಾಥ್ರಿನ್ ಜತೆಗೆ 3.7 ಲಕ್ಷ ಡಾಲರ್‌ಗೆ ಒಪ್ಪಂದವೊಂದನ್ನು ಮಾಡಿಕೊಂಡ. ಒಪ್ಪಂದದ ಪ್ರಕಾರ, ಈ ಬಗ್ಗೆ ಇನ್ನು ಮುಂದೆ ಕ್ಯಾಥ್ರಿನ್ ಬಹಿರಂಗವಾಗಿ ಏನೂ ಮಾತನಾಡುವಂತಿಲ್ಲ. ಅದಾಗಿ 9 ವರ್ಷಗಳ ಕಾಲ ಕ್ಯಾಥ್ರಿನ್ ಬಾಯಿ ಬಿಟ್ಟಿಲ್ಲ. ಆದರೆ ಇದೀಗ 'ಮಿ ಟೂ' ಅಭಿಯಾನದ ಹೆಸರಲ್ಲಿ ಬಾಯಿ ಬಿಟ್ಟಿದ್ದಾಳೆ. ಆಕೆಯ ವಕೀಲರ ಪ್ರಕಾರ, ಒಪ್ಪಂದಕ್ಕೆ ರೊನಾಲ್ಡೊ ಸಹಿ ಹಾಕಿದ್ದು ಮತ್ತು ಪರಿಹಾರ ಹಣ ಕೊಟ್ಟಿದ್ದು ಅತ್ಯಾಚಾರ ನಡೆದದ್ದನ್ನು ಒಪ್ಪಿದಂತೆಯೇ. ಆದರೆ ರೊನಾಲ್ಡೊ ವಕೀಲರ ಪ್ರಕಾರ, 'ರೊನಾಲ್ಡೊ ಘನತೆ ಮತ್ತು ವರ್ಚಸ್ಸಿಗೆ ಧಕ್ಕೆ ಬರಬಾರದೆಂದು ಒಪ್ಪಂದಕ್ಕೆ ಸಹಿ ಹಾಕಿದ್ದಾನೆ.'

ಈಗ ಪ್ರಕರಣ ರೊನಾಲ್ಡೊ ವಕೀಲರು ಹೇಳಿದಷ್ಟು ಸರಳವಾಗಿಲ್ಲ. 'ಇಷ್ಟು ವರ್ಷ ನನ್ನ ಕಕ್ಷಿದಾರಳಾದ ಕ್ಯಾಥ್ರಿನ್ ಮಾನಸಿಕ ಸಂಕಟಕ್ಕೆ ಒಳಗಾಗಿದ್ದಾಳೆ. ದೈಹಿಕವಾಗಿಯೂ ಕುಗ್ಗಿದ್ದಾಳೆ. ಆಗ ಒಪ್ಪಂದಕ್ಕೆ ಸಹಿ ಹಾಕಲು ರೊನಾಲ್ಡೊ ಕಡೆಯವರು ತೀವ್ರ ಒತ್ತಡ ಹಾಕಿದ್ದರು. ಸೂಪರ್‌ಸ್ಟಾರ್ ಒಬ್ಬನ ಒತ್ತಡಕ್ಕೆ ಸಹಜವಾಗಿ ಆಕೆ ಮಣಿಯಬೇಕಾಯಿತು. ಈಗ ನ್ಯಾಯ ಕೊಡಿಸಿ' ಎಂದು ಕ್ಯಾಥ್ರಿನ್ ವಕೀಲರು ಹೇಳುತ್ತಿದ್ದಾರೆ. 2017ರಲ್ಲಿ ಈ ಒಪ್ಪಂದದ ವಿವರಗಳನ್ನು ಜರ್ಮನಿಯ ನಿಯತಕಾಲಿಕೆ ಪ್ರಕಟಿಸಿತ್ತು. ಆಗ 'ಒಪ್ಪಂದ ಆಗಿಯೇ ಇಲ್ಲ, ಎಲ್ಲ ಕಟ್ಟುಕಥೆ' ಎಂದು ರೊನಾಲ್ಡೊ ವಕೀಲರು ಹೇಳಿದ್ದರು. ಆದರೆ ಸ್ವಲ್ಪ ಸಮಯದ ಬಳಿಕ ಒಪ್ಪಂದ ನಡೆದಿರುವುದು ನಿಜ ಎಂದು ರೊನಾಲ್ಡೊ ಬರೆದ ಇಮೇಲ್‌ಗಳು ಪ್ರಕಟವಾಗಿದ್ದವು. ಈ ಇಮೇಲ್ ದಾಖಲೆಗಳು ಸುಳ್ಳು. ರೊನಾಲ್ಡೊ ಇಮೇಲ್ ಖಾತೆಗೆ ಆಗ ಯಾರೋ ಕನ್ನ ಹಾಕಿದ್ದರು. ಬಳಿಕ ದಾಖಲೆಗಳನ್ನು ತಿದ್ದಿ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ ಎಂದು ಆತನ ವಕೀಲರು ಈಗ ವಾದ ಮಂಡಿಸಿದ್ದಾರೆ.

ಎಲ್ಲವನ್ನೂ ನೋಡಿದರೆ ರೊನಾಲ್ಡೊ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಕಷ್ಟ. ಆದರೆ ಇಬ್ಬರ ನಡುವೆ ಮತ್ತೊಂದು ಒಪ್ಪಂದವಾಗಬಹುದೆ ಎನ್ನುವ ಪ್ರಶ್ನೆಯೂ ಇದೆ. ಸೆಲೆಬ್ರಿಟಿಗಳ ನಡೆಯನ್ನು ಹೀಗೆಯೇ ಎಂದು ಹೇಳಲಾಗದು.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65